## ಕಾಸರಗೋಡು ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ.

೫೯೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕಕ್ಕೆ ನ್ಯಾಯಯುತವಾಗಿ ಸೇರಬೇಕಾದ ಕಾಸರಗೋಡು ಪ್ರದೇಶವನ್ನು ಸೇರಿಸುವ ಬಗ್ಗೆ ಮುಖ್ಯಮಂತ್ರಿಗಳು ಪ್ರಧಾನಿಯವರಿಗೆ ಪತ್ರ ಬರೆದಿರುವುದು ನಿಜವೇ ?

ಆ) ಈ ಬಗ್ಗೆ ರಾಷ್ಟ್ರದ ಪ್ರಧಾನಿಯವರಿಂದ ಬಂದ ಉತ್ತರವೇನು ?

ಇ) ಕರ್ನಾಟಕ ಗಡಿ ಪ್ರದೇಶಗಳ ಸಮಸ್ಯೆಯನ್ನು ಪ್ರಭಾವಯುತವಾಗಿ ಕೇಂದ್ರಕ್ಕೆ ಮನವರಿಕೆ ಮಾಡಲು ರಾಜ್ಯದಿಂದ ಸರ್ವ ಪಕ್ಷಗಳ ನಿಯೋಗವೊಂದನ್ನು ಕಳುಹಿಸಲು ಸರ್ಕಾರದವರು ಆಲೋಚಿಸುವರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಪ್ರಧಾನ ಮಂತ್ರಿಗಳು ಸ್ವೀಕೃತಿ ಪತ್ರ ಕಳುಹಿಸಿದ್ದು, ವಿಷಯವನ್ನು ಪರಿಶೀಲಿಸುವೆನೆಂದು ತಿಳಿಸಿದ್ದಾರೆ.

ಇ) ಸದ್ಯಕ್ಕೆ ಸರ್ಕಾರವು ಈ ರೀತಿ ಆಲೋಚಿಸುತ್ತಿಲ್ಲ, ಅವಶ್ಯವೆನಿಸಿದರೆ ಇಂತಹ ಕ್ರಮವನ್ನು ಕೈಗೊಳ್ಳಲಾಗುವುದು.

## ಭದ್ರಾವತಿ ಜಿಲ್ಲಾ ಅರಣ್ಯಾಧಿಕಾರಿ ಕಛೇರಿಯಲ್ಲಿ ೧೯೮೪–೮೫ ಮತ್ತು ೧೯೮೫–೮೬ ರಲ್ಲಿ ನಡೆದ ಕಾಂಟ್ರಾಕ್ಟರ್ ಕೆಲಸದ ವಿವರದ ಬಗ್ಗೆ.

೨೭೩. ಶ್ರೀ ಬಿ, ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ವಿಭಾಗದ ಜಿಲ್ಲಾ ಅರಣ್ಯಾಧಿಕಾರಿ ವಿರುದ್ಧ ದೂರು ಬಂದಿರುವುದು ನಿಜವೇ?

ಆ) ಭದ್ರಾವತಿ ಜಿಲ್ಲಾ ಅರಣ್ಯಾಧಿಕಾರಿಗಳು ಕಚೇರಿ ಮುಂದೆ ಗುಂಡಿ ಮುಚ್ಚಿಸಿ ಮರಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಲು ಖರ್ಚು ಮಾಡಿರುವ ಹಣವೆಷ್ಟು ?

ಇ) ಭದ್ರಾವತಿ ಅರಣ್ಯ ಇಲಾಖೆ ಕಂಟ್ರಾಕ್ಟರ್ ಶ್ರೀ ಸುಬ್ಬಾರೆಡ್ಡಿಯವರಿಗೆ ೧೯೮೪–೮೫ ಮತ್ತು ೧೯೮೫–೮೬ ರಲ್ಲಿ ಅಭಿವೃದ್ಧಿ ಕೆಲಸ ಮತ್ತು ಇತರೆ ಕೆಲಸಕ್ಕೆ ಕೊಟ್ಟಿರುವ ಕೆಲಸ ಮತ್ತು ಹಣದ ಹಣದ ಮೊತ್ತವೆಷ್ಟು ? ಅದೇ ರೀತಿ ಈ ಎರಡು ವರುಷ ಬೇರೆ ಕಂಟ್ರಾಕ್ಟುದಾರರಿಗೆ ಕೊಟ್ಟಿರುವ ಕೆಲಸದ ವಿವರವೇನು ? ಅವರ ಹೆಸರು ಮತ್ತು ಕೊಟ್ಟಿರುವ ಕಂಟ್ರಾಕ್ಟ್ ಕೆಲಸದ ವಿವರ ಮತ್ತು ಮೊತ್ತವೇನು ?

ಶ್ರೀ ಜಿ. ವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಭದ್ರಾವತಿ ಜಿಲ್ಲೆ ಅರಣ್ಯಾಧಿಕಾರಿ ಕಚೇರಿ ಮುಂದೆ ೭೭ ಗುಂಡಿಗಳನ್ನು ಹೊಸದಾಗಿ ತೆಗಿಸಿ ೭೭ ಮರಗಿಡಗಳನ್ನು ನೆಟ್ಟು ಅಭಿವೃದ್ಧಿ ಪಡಿಸಲು ಖರ್ಚು ಮಾಡಿರುವ ಹಣ ರೂ. ೩೦೦ ಮಾತ್ರ.

ಇ) ಸುಬ್ಬಾರೆಡ್ಡಿ ಎನ್ನುವ ಫಾರೆಸ್ಟ್ ಕಂಟ್ರಾಕ್ಟರ್ ಯಾರೂ ಇರುವುದಿಲ್ಲ. ಇದರೆ ಬಿ. ಸುಬ್ರಮಣ್ಯರೆಡ್ಡಿ ಎಂದು ಹೆಸರಿರುವ ಫಾರೆಸ್ಟ್ ಕಂಟ್ರಾಕ್ಟರ್ ಇದ್ದಾರೆ ಮತ್ತು ಅವರಿಗೆ ಅಭಿವೃದ್ಧಿ ಕೆಲಸವನ್ನು ವಹಿಸಿ ಕೊಡಲಾಗಿದೆ.